# ಮರಿನಾಳ ವಿಶ್ವಮೈತ್ರಿಯ ಸ್ಕಾರ್ಫ್

‘ಸ್ಕಾರ್ಫ್ ತಯಾರಿಸಲು ಬಳಸಲಾದ ಒಂದೊಂದು ದಾರವೂ ಒಂದೊಂದು ದೇಶದ್ದು. ಹೆಣೆಯುವಾಗ ಬಹಾಮಾದ ಬಿಸಿ, ಲಂಡನ್‌ನ ಮಳೆ, ಹಾಂಕಾಂಗ್‌ನ ರಾತ್ರಿ, ಒಸಾಕಾದ ಪುರಾತನ ಅರಮನೆಗಳು, ಭಾರತದ ಹಬ್ಬಗಳು, ಈಜಿಪ್ಟ್‌ನ ಪಿರಮಿಡ್‌ಗಳು... ನನ್ನ ಕಣ್ಮುಂದೆ ಬರುತ್ತಿದ್ದವು. ಹೆಣೆಯುತ್ತಲೇ ಪ್ರಪಂಚವನ್ನು ಸುತ್ತಿದೆ! ಈ ಸ್ಕಾರ್ಫ್‌ನಲ್ಲಿ ಬ್ರೆಜಿಲ್‌ನ ಅರಣ್ಯ, ಆಫ್ರಿಕಾದ ಮರುಭೂಮಿ, ಉತ್ತರ ಧ್ರುವದ ಚಳಿ ಮತ್ತು ದಕ್ಷಿಣ ಧ್ರುವದಿಂದ ಬಂದ ದಾರಗಳಿವೆ. ನನ್ನಲ್ಲಿಗೆ ಅವು ಬರಲು ಸಾಕಷ್ಟು ಶ್ರಮ ಪಟ್ಟಿವೆ. ಹೆಲಿಕಾಪ್ಟರ್, ದೋಣಿ, ಹಡಗು, ಏರೋಪ್ಲೇನ್, ರೈಲು ಹಾಗೂ ರಸ್ತೆಯ ಮೂಲಕ ಆಗಮಿಸಿವೆ’ ಎಂದು ಬಣ್ಣಿಸುತ್ತಾಳೆ ಮರಿನಾ.

ಇದೊಂದು ವಿನೂತನ ಯೋಜನೆ. ರಷ್ಯಾ ದೇಶದ ಟಾಂಬೋವ್ ಪ್ರದೇಶದ ರಾಸ್ಕಜೋವೋ ಎಂಬ ಊರು ‘ನಿಟ್ಟಿಂಗ್(ಹೆಣಿಗೆ) ರಾಜಧಾನಿ’ ಎಂದೇ ಹೆಸರುವಾಸಿ. ಅಲ್ಲಿ ಅಷ್ಟೊಂದು ಮಂದಿ ಹೆಣಿಗೆ ಮಾಡುವವರಿದ್ದಾರೆ. ಆ ಊರಿನವಳಾದ ಮರಿನಾ ‘ಪೋಸ್ಟ್‌ಕ್ರಾಸಿಂಗ್’ ಎಂಬ ವಿಶ್ವದಾದ್ಯಂತ ಪೋಸ್ಟ್ ಕಾರ್ಡ್ ಕಳುಹಿಸಿ ಪಡೆಯುವ ಸಂಘದ ಸದಸ್ಯೆ ಕೂಡ. ವಿಶ್ವದ ನಾನಾ ದೇಶಗಳಿಂದ ಪೋಸ್ಟ್‌ಕ್ರಾಸರ್‌ಗಳ ಮೂಲಕ ಬರುವ ಕಾರ್ಡ್ ಜೊತೆ ನೂಲು ಪಡೆದು ವಿಶೇಷ ಸ್ಕಾರ್ಫ್ ಹೆಣೆಯಬೇಕೆಂಬ ಆಲೋಚನೆ ಆಕೆಗೆ ಬಂತು. ಅದಕ್ಕೆ ‘ಸ್ಕಾರ್ಫ್ ಆಫ್ ಫ್ರೆಂಡ್‌ಷಿಪ್’ ಎಂದು ಹೆಸರಿಟ್ಟು ಪೋಸ್ಟ್‌ಕ್ರಾಸರ್‌ಗಳ ಬಳಿ ನೂಲು ಕಳುಹಿಸಲು ಕೋರಿದಳು. ಬಣ್ಣಬಣ್ಣದ ನೂಲು ನಾನಾ ದೇಶಗಳಿಂದ ಬರಲು ಪ್ರಾರಂಭಿಸಿತು.

2017 ರಲ್ಲಿ ಪ್ರಾರಂಭವಾದ ಸ್ಕಾರ್ಫ್ ಹೆಣಿಗೆ ಒಂದು ವರ್ಷಕ್ಕೆಲ್ಲಾ ಹತ್ತು ಮೀಟರ್ ಉದ್ದಕ್ಕೆ ಬೆಳೆಯಿತು. ಅಂಗೋರಾದ ಕುರಿಯ ಉಣ್ಣೆಯ ದಾರ, ಕಾಶ್ಮೀರಿ ದಾರ, ಅಕ್ರೈಲಿಕ್, ಬಿದಿರಿನಿಂದ ತಯಾರಾದ ದಾರ ಕೂಡ ಇದರಲ್ಲಿದೆ. ಆರು ಖಂಡಗಳ 60 ದೇಶಗಳ ವಿವಿಧ ಬಣ್ಣ ವೈವಿಧ್ಯದ ದಾರಗಳಿಂದ ಹೆಣೆದ ಸ್ಕಾರ್ಫ್ ವಿಶ್ವಮೈತ್ರಿಯ ಪ್ರತೀಕವಾಗಿದೆ.

■ ಡಿ.ಜಿ.ಮಲ್ಲಿಕಾರ್ಜುನ



